‘ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹತ್ತಿ ಉರಿದರೆ ನಿಲಲುಬಾರದು’ ಎಂದರು ಬಸವಣ್ಣ. ಇಂದಿನದೋ ಧರೆಯ ಜೊತೆಗೆ ಆಕಾಶವೂ ಉರಿಯುತ್ತಿರುವ ಸಂದರ್ಭ. ಮಾಲಿನ್ಯದ ಪೆಡಂಭೂತ ನೆಲ-ಮುಗಿಲುಗಳನ್ನು ವ್ಯಾಪಿಸಿಕೊಂಡಿದೆ. ಅಮೆಜಾನ್ ಮಳೆಕಾಡುಗಳಲ್ಲಿ ಬೆಂಕಿಯ ರುದ್ರನರ್ತನ. ದೆಹಲಿಗೆ ವಿಷವಾಯುವಿನ ಆಲಿಂಗನ. ಪದೇಪದೇ ಚಂಡಮಾರುತಗಳ ಆಗಮನ. ಯೂರೋಪ್‌ನಲ್ಲಿ ಸನ್‌ಬರ್ನ್ ತಾಂಡವ. ಇವೆಲ್ಲ ಸೂಚಿಸುತ್ತಿರುವುದು ಒಂದನ್ನೇ - ‘ಜಗತ್ತು ಅಪಾಯದ ಅಂಚಿನಲ್ಲಿದೆ’ ಎನ್ನುವುದನ್ನು. ಹಾಗಿದ್ದರೆ ಈ ಅಪಾಯಕ್ಕೆ ಏನು ಕಾರಣ? ಈ ಪ್ರಶ್ನೆಯನ್ನು ನಾವೆಲ್ಲ ಗಂಭೀರವಾಗಿ ಚಿಂತಿಸಿ ಪರಿಹಾರದ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗದೆ ಹೋದರೆ, ಇಂಥ ಪ್ರಶ್ನೆ ಕೇಳಲಿಕ್ಕೆ ಮುಂದಿನ ತಲೆಮಾರುಗಳೇ ಇರುವುದಿಲ್ಲ.

**ಟಿ.ಆರ್. ಅನಂತರಾಮು**



# ಹವಾಗುಣ ಬದಲಾವಣೆ ಯಾರು ಹೊಣೆ?